ಮಾಡುತ್ತೇನೆ ಎಂದು ಹೇಳಿ ಈ ಗೋಣಿಕೊಪ್ಪ ಮೈಸೂರು ಮಧ್ಯೆ ಟ್ರಾಫಿಕ್ ಹೆಚ್ಚಿಗೆ ಇದೆ ಎಂದು ಕಂಡುಬಂದಿರುವುದರಿಂದ ಇಲ್ಲೂ ಹೆಚ್ಚಿಗೆ ಸಾರಿಗೆ ಸಂಸ್ಥೆ ಬಸ್ಸುಗಳನ್ನು ಓಡಿಸಲಿಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಹೆಚ್.ಡಿ. ಬಸವರಾಜ್:- ಪರವಾನಗಿ ಇಲ್ಲದೇ ಓಡಾಡುತ್ತಿರುವ ಮೆಟಡಾರ್‌ಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ನಾನು ಹೇಳಿದೆ. ತಾವು ಹೇಳಿದಿರಿ ಮೂರು ಜನಕ್ಕೆ ಅದರಿಂದ ಕೆಲಸ ಸಿಗುತ್ತದೆ, ಅವರು ಐದಾರು ಲಕ್ಷ ರೂಪಾಯಿ ಅದನ್ನು ಕೊಳ್ಳಲಿಕ್ಕೆ ಸಾಲ ಮಾಡಿರುತ್ತಾರೆ ಎಂದು. ಅದರ ಬಗ್ಗೆ ನಾನು ಕೇಳಲಿಲ್ಲ. ಪರವಾನಗಿ ಇಲ್ಲದೆ ಓಡಿಸುತ್ತಿದ್ದಾರೆ. ತಾವೇ ಹೇಳಿದ್ದೀರಿ. ಅನಧಿಕೃತವಾಗಿ ಓಡುತ್ತಾ ಇರುವಂಥದ್ದು ಕಳ್ಳಾಟಿಕೆಯಿಂದ. ಇದನ್ನು ಸ್ಪಷ್ಟವಾಗಿ ತಾವು ತಿಳಿಸಿದ್ದೀರಿ. ಕಳ್ಳಾಟಿಕೆಯಿಂದ ಓಡಾಡುವುದಕ್ಕೆ ನಾವು ಏತಕ್ಕೆ ಎನ್‌ಕರೇಜ್ ಮಾಡಬೇಕು? ಇವತ್ತು ಕಳ್ಳತನ ನಡೆಯುತ್ತದೆಂದರೆ ಸಾವಿರಾರು ಜನ ಅದರಲ್ಲಿದ್ದಾರೆ ಎಂದು ಪ್ರೋತ್ಸಾಹ ಕೊಡುವುದಕ್ಕಾಗುತ್ತದೆಯೇ? ಆದ್ದರಿಂದ ಈ ಕಳ್ಳಾಟಿಕೆಯಿಂದ ಓಡಾಡುವಂಥ ಯಾವುದು ಮೆಟಡಾರ್ ಇದೆ ಅದನ್ನು ತಾವು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಹೇಳುತ್ತಿದ್ದೇನೆ. ತಾವು ಪರವಾನಗಿ ಕೊಟ್ಟಿದ್ದರೆ ಬೇಡ. ದಯವಿಟ್ಟು ಇದರ ಬಗ್ಗೆ ಸೂಕ್ತವಾದ ಕ್ರಮ ಕೈಗೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಉಪಾಧ್ಯಕ್ಷರೆ, ಪರವಾನಗಿ ಇಲ್ಲದೇ ಇರುವಂಥ ಎಲ್ಲಾ ವಾಹನಗಳ ಮೇಲೂ ಸಹಿತ ಅಕ್ರಮವಾಗಿ ನಡೆಸತಕ್ಕ ಎಲ್ಲಾ ಚಾಲನೆಯನ್ನು ಕೂಡ ನಿಲ್ಲಿಸತಕ್ಕಂಥದ್ದು ಸರ್ಕಾರದ ಕರ್ತವ್ಯವಾಗುತ್ತದೆ. ಆ ಕೆಲಸವನ್ನು ನಾನು ಮಾಡುತ್ತೇನೆ.

ವಿಷಯ:- ಗೋಕಾಕ್ ತಾಲ್ಲೂಕಿನ ಕೆಲವು ಹಳ್ಳಿಗಳಿಗೆ ಬಸ್ ಸಂಚಾರ ಇಲ್ಲದೇ ಇರುವುದು.

369 (2170) ಶ್ರೀ ಚಂದ್ರಶೇಖರ ನಾಯಕ (ಗೋಕಾಕ್):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೋಕಾಕ್ ತಾಲ್ಲೂಕಿನ ನೆಲಗಂಟಿ, ಮಲಾಮರಡಿ, ಗುದನಟ್ಟಿ, ಕಡಬಗಟ್ಟಿ ಗಡ ಮತ್ತು ಜಮದಾಳ ಗ್ರಾಮಕ್ಕೆ ಬ್ರಿಟೀಷರ ಕಾಲದಿಂದಲೂ ಬಸ್ ಸಂಚಾರವಿಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಬಸ್ ಸಂಚಾರ ಕಲ್ಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು):-

ಅ) ಹೌದು